**ದಿನಾಂಕ:26-02-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ಆರ್.ಸಿ.ಪಿ. ರವರಿಂದಃ-**

ಸಿದ್ದರಾಯಿ ರವರ ತಂದೆ ಮಲ್ಲಪ್ಪ ಕೊಲ್ಕಾರ್ ಎಂದರೆ ಸರಿ. ಮಲ್ಲಪ್ಪ ರವರಿಗೆ ಕರಿಯವ್ವ ಮತ್ತು ಕಾಶವ್ವ ಎಂಬ ಇಬ್ಬರು ಹೆಂಡತಿಯರು ಎಂದರೆ ಸರಿ. ಕರಿಯವ್ವ ರವರಿಗೆ ಗಂಡು ಮಕ್ಕಳು ಇರಲಿಲ್ಲ, ಬಾಗವ್ವ ಮಾತ್ರ ಮಗಳು ಇದ್ದರು . ಬಾಗವ್ವ ರವರನ್ನು ಸಂಗಪ್ಪ ಕಲ್ಲಪತ್ರಿ ರವರಿಗೆ ಕೊಟ್ಟಿದ್ದರು , ಬಾಗವ್ವ ಈಗ ಮರಣ ಹೊಂದಿರುತ್ತಾರೆ ಎಂದರೆ ಸರಿ. ಕಾಶವ್ವ ರವರಿಗೆ ಹೆಣ್ಣು ಮಕ್ಕಳು ಇರಲಿಲ್ಲ, ಗಂಡು ಮಗ ಸಿದ್ದರಾಯಿ ರವರು ಇದ್ದರು ಎಂದರೆ ಸರಿ. ದಾವಾ ಸ್ವತ್ತುಗಳು ಕರಿಯವ್ವ ಮತ್ತು ಕಾಶವ್ವ ರವರ ತವರು ಮನೆ ಸ್ವತ್ತುಗಳು ಎಂದರೆ ಸರಿ. ತವರು ಮನೆ ಆಸ್ತಿ ಎಂದರೆ Shtridhana ಆಸ್ತಿಗಳು ಎಂದರೆ ಸರಿ. ದಿನಾಂಕ 23.07.1968 ರಲ್ಲಿ ಕಾಶವ್ವ, ಕರಿಯವ್ವ ರವರು ವರದಿ ಕೊಟ್ಟರು , ಬಾಗವ್ವ ರವರು ಕಬೂಲಿ ಪತ್ರ ಬರೆದುಕೊಟ್ಟು ಸಿದ್ದರಾಯಿ ರವರ ಹೆಸರಿನಲ್ಲಿ ಎಲ್ಲಾ ಸ್ವತ್ತುಗಳು ಹೋಗಬೇಕೆಂದು ಬರೆದುಕೊಟ್ಟರು ಎಂದರೆ ಸರಿ. ಆ ಪ್ರಕಾರ ಡೈರಿ ಸಂಖ್ಯೆ 2099 ರಂತೆ ಸಿದ್ದರಾಯಿ ರವರ ಹೆಸರು ನಮೂದಿಸಲಾಯಿತು ಎಂದರೆ ಸರಿ.

**2.** ಸಿದ್ದರಾಯಿ ರವರಿಗೆ ಇಬ್ಬರು ಹೆಣ್ಣು ಮಕ್ಕಳು , ಇಬ್ಬರು ಗಂಡು ಮಕ್ಕಳು. ಗಂಡು ಮಕ್ಕಳೆಂದರೆ ರಾಮಲಿಂಗ ಮತ್ತು ಪುಂಡಲೀಕ ಎಂದರೆ ಸರಿ. ಹೆಣ್ಣು ಮಕ್ಕಳೆಂದರೆ ಸಿದ್ದವ್ವ ಬೊಮ್ಮಣ್ಣವರ್ ಮತ್ತು ಭಾಗೀರಥಿ ಕಲ್ಪತ್ರಿ. ಭಾಗೀರಥಿ ರವರು ಈಗ ಮರಣ ಹೊಂದಿದ್ದಾರೆ. ದ್ದವ್ವ ಬೊಮ್ಮಣ್ಣವರ್ ಮತ್ತು ಭಾಗೀರಥಿ ಕಲ್ಪತ್ರಿ ರವರಿಗೆ ಮಕ್ಕಳು ಇದ್ದಾರೆ . ಪುಂಡಲೀಕ ರವರಿಗೆ 3 ಜನ ಮಕ್ಕಳು ಇದ್ದಾರೆ. ಸಿದ್ದರಾಯಿ ರವರು ಪ್ರತಿವಾದಿಗಳ ಅಜ್ಜ ಬಸವಂತಪ್ಪ ಚೌಗಲ ರವರಿಗೆ ದಿನಾಂಕ 31.10.1969 ರಂದು ಖರೀದಿ ಪತ್ರ ಬರೆದುಕೊಟ್ಟರು ಎಂದರೆ

ಸರಿಯಲ್ಲ. ಸಿದ್ದರಾಯಿ ರವರು ಜೆಎನ್‌ಎಂಸಿ ಯಲ್ಲಿ ಅಟೆಂಡರ್ ಆಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಅವರು ಸುಶಿಕ್ಷಿತರಾಗಿದ್ದರು ಎಂದರೆ ಸರಿ. ಖರೀದಿ ಪತ್ರದಲ್ಲಿ ಕುಟುಂಬದ ಅಡಚಣೆ ಸಲುವಾಗಿ ಹಣದ ಅವಶ್ಯಕತೆ ಇರುವುದರಿಂದ ಖರೀದಿ ಪತ್ರ ಬರೆದುಕೊಡಲಾಗಿದೆ ಎಂದು ಬರೆಯಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರು ನೌಕರಿ ಮಾಡುತ್ತಿದ್ದರಿಂದ ಹಣದ ಅಡಚಣೆ ಇರಲಿಲ್ಲ ಎನ್ನುತ್ತಾರೆ. ಖರೀದಿ ಪತ್ರದಲ್ಲಿ ಆಸ್ತಿಯ ಕುರಿತು ತಂಟೆ ಬೋಜ ಇರುವುದಿಲ್ಲ, ಬಂದರೆ ಅದನ್ನು ಪರಸ್ಪರ ಸ್ವತಃದ ಖರ್ಚಿನಿಂದ ನಿಭಾಯಿಸಿಕೊಡುವೆನು ಹಾಗೂ ನಿಮ್ಮ ಮಾಲ್ಕೀ ಹಾಗೂ ಕಬ್ಜಾ ಸುರಕ್ಷತವಾಗಿರುವೆನು . ಮೇಲಿನ ಕರಾರು ನನಗೆ ಮತ್ತು ನನ್ನ ವಾರಸುದಾರರಿಗೆ ಬಂದನಕಾರಕವಿರುತ್ತದೆ ಎಂದು ಬರೆದುಕೊಡಲಾಗಿದೆ ಎಂದರೆ ಸರಿಯಲ್ಲ. ಖರೀದಿ ಪತ್ರದಲ್ಲಿ ರೈತಾವ ಆದ ನಂತರ ಖರೀದಿ ಪತ್ರ ಬರೆದುಕೊಡಲಾಗಿದೆ ಎಂದು ಬರೆಯಲಾಗಿದೆ ಎಂದರೆ ಸರಿಯಲ್ಲ . ಸಾಕ್ಷಿಯು ಮುಂದುವರೆದು ಜಮೀನು ಬರೆದುಕೊಡುವ ಅವಶ್ಯಕತೆ ನಮ್ಮ ಅಜ್ಜನಿಗೆ ಇರಲಿಲ್ಲ ಎನ್ನುತ್ತಾರೆ. ಖರೀದಿ ಪತ್ರವಾದ ನಂತರ ಬಸವಂತಪ್ಪ ರವರು ತಮ್ಮ ಹೆಸರನ್ನು ದಾಖಲೆಗಳಲ್ಲಿ ನಮೂದಿಸಿಕೊಂಡು ಕಬ್ಜೆ ವಹಿವಾಟಿನಲ್ಲಿದ್ದಾರೆ ಎಂದರೆ ಸರಿಯಲ್ಲ , ಸಾಕ್ಷಿ ನಾವೇ ಕಬ್ಜೆಯಲ್ಲಿದ್ದಾರೆ ಎನ್ನುತ್ತಾರೆ.

**3.** ಬಸವಂತಪ್ಪ ರವರ ಜೀವಿತಾವಧಿಯಲ್ಲಿ ನಿಮ್ಮ ಅಜ್ಜ ಪೊಲೀಸ್ ಠಾಣೆಯಲ್ಲಿ ಕೇಸು ವಗೈರೆ ಮಾಡಿರಲಿಲ್ಲ ಎಂದರೆ ಸರಿ . ಸಾಕ್ಷಿ ಜಮೀನಿನ ಕಬ್ಜೆ ನಮ್ಮ ಬಳಿ ಇತ್ತು , ನಾವು ಯಾವುದೇ ಸ್ಟೇಷನಿಗೆ ಹೋಗಿಲ್ಲ ಎನ್ನುತ್ತಾರೆ. ನಿಮ್ಮ ಅಜ್ಜನ ಕಾಲದಿಂದಲೂ ಇಲ್ಲಿಯವರೆಗೂ ಪ್ರತಿವಾದಿಗಳ ವಿರುದ್ಧ ಯಾವುದೇ ಕ್ರಿಮಿನಲ್ ಕೇಸು ಆಗಿಲ್ಲ ಎಂದರೆ ಸರಿ. ಖರೀದಿಪತ್ರವಾದ ನಂತರದಿಂದ ದಾವಾ ಸ್ವತ್ತಿನ ಕರ ಪಾವತಿಯನ್ನು ಬಸವಂತಪ್ಪ ರವರು, ಆ ನಂತರ ಅವರ ಮಗ

ಮತ್ತು ಈಗ ಪ್ರತಿವಾದಿಗಳು ತುಂಬಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. ದಾವಾ ಸ್ವತ್ತಿನ ಕಬ್ಜೆಯಲ್ಲಿ ನಾವೇ ಇದ್ದೇವೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ದಾವಾ ಸ್ವತ್ತಿನ ಕುರಿತು ನನ್ನನ್ನು ಹೊರತುಪಡಿಸಿ ಸಿದ್ದರಾಯಿ ರವರ ಇತರೆ ವಾರಸುದಾರರು ಇಲ್ಲಿಯವರೆಗೂ ಯಾವುದೇ ತಂಟೆ ತಕರಾರು ಮಾಡಿಲ್ಲ ಎಂದರೆ ಸರಿ. ದಾವಾ ಸ್ವತ್ತಿನ ವಿಷಯವಾಗಿ ನನಗೆ ಮತ್ತು ಪ್ರತಿವಾದಿಗಳಿಗೆ ಯಾವುದೇ ತಂಟೆ ತಕರಾರು ಆಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ನಾನು ಪ್ರತಿವಾದಿಗಳನ್ನು ಕೇಳಲು ಹೋದಾಗ ಅವರು ನನ್ನ ಮೇಲೆ ದಾದಾಗಿರಿ ಮಾಡಿದ್ದರು ಎನ್ನುತ್ತಾರೆ. ಪ್ರತಿವಾದಿಗಳು ದಾದಾಗಿರಿ ಮಾಡಿದ್ದರು ಎಂದು ತೋಗಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

**4.** ನನ್ನ ಅಜ್ಜ ಸಿದ್ದರಾಯಿ ರವರಿಗೆ 1969 ರಲ್ಲಿ ಹಣಕಾಸಿನ ತೊಂದರೆ ಇತ್ತು, ಆದ್ದರಿಂದ ಸಿದ್ದರಾಯಿ ರವರು ಬಸವಂತಪ್ಪ ರವರಿಂದ ಹಣ ಪಡೆದು ಖರೀದಿ ಪತ್ರ ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ಅಜ್ಜ ನೌಕರಿ ಮಾಡುತ್ತಿದ್ದರು, ಹಣಕಾಸಿನ ತೊಂದರೆ ಇರಲಿಲ್ಲ ಎನ್ನುತ್ತಾರೆ. ಮನೆಯ ಮುಖ್ಯಸ್ಥ ಸಿದ್ದರಾಯಿ ರವರು ಆಗಿದ್ದರಿಂದ ಹಣಕಾಸಿನ ತೊಂದರೆ ನೀಗಿಸಲು ಖರೀದಿ ಪತ್ರ ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ಖರೀದಿ ಪತ್ರವಾದ ನಂತರ ಪ್ರತಿವಾದಿಗಳ ಅಜ್ಜ 1970 ರಲ್ಲಿ ಮರಣ ಹೊಂದಿದರು ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ಬಸವಂತಪ್ಪ ರವರ ಮರಣಾನಂತರ ಅವರ ಮಕ್ಕಳಾದ ಕೇದಾರಿ, ಯಲ್ಲಪ್ಪ ಮತ್ತು ಮಹದೇವ ರವರ ಹೆಸರು ದಾವಾ ಸ್ವತ್ತಿನ ದಾಖಲೆಗಳಲ್ಲಿ ನಮೂದಾಯಿತು ಎಂದರೆ ಸಾಕ್ಷಿ ಅವರು ಬೋಗಸ್ ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದಾರೆ ಎನ್ನುತ್ತಾರೆ. ಬಸವಂತಪ್ಪ ರವರ ಮರಣಾನಂತರ ಅವರ ಮಕ್ಕಳ

ಹೆಸರಿನಲ್ಲಿ ಡೈರಿ ನಮೂದು ಆದಾಗ ನಾನು ಹುಟ್ಟಿರಲಿಲ್ಲ ಎಂದರೆ ಸರಿ. ಕೇದಾರಿ, ಯಲ್ಲಪ್ಪ ಮತ್ತು ಮಹದೇವ ರವರು ತಮ್ಮ ಜೀವಿತಾವಧಿಯಲ್ಲಿ ಮಾಲ್ಕೀನಾತೆಯಿಂದ ಉಳುಮೆ ಮಾಡಿಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ನಾವೇ ಉಳುಮೆ ಮಾಡುತ್ತಿದ್ದೆವು ಎನ್ನುತ್ತಾರೆ. ನಾವೇ ಉಳುಮೆ ಮಾಡುತ್ತಿದ್ದೆವು ಎಂದು ತೋರಿಸಲು ದಾಖಲೆಗಳು ಇಲ್ಲ ಎಂದರೆ ಸಾಕ್ಷಿ ಕಬ್ಜೆ ನಮ್ಮ ಬಳಿ ಇದೆ ಎನ್ನುತ್ತಾರೆ. ಕೇದಾರಿ, ಯಲ್ಲಪ್ಪ ಮತ್ತು ಮಹದೇವ ರವರ ಮರಣಾನಂತರ ಪ್ರತಿವಾದಿಗಳೇ ಮಾಲ್ಕೀನಾತೆಯಿಂದ ದಾವಾ ಸ್ವತ್ತನ್ನು ಉಳುಮೆ ಮಾಡುತ್ತಾ ಬರುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ದಿನಾಂಕ 23.05.2021 ರಂದು ಮರಣ ಹೊಂದಿರುತ್ತಾರೆ. ದಾವಾ ಸ್ವತ್ತಿನ ಮೌಲ್ಯ ಹೆಚ್ಚಾಗಿದ್ದರಿಂದ ಪ್ರತಿವಾದಿಗಳಿಂದ ದಾವಾ ಸ್ವತ್ತನ್ನು ಪಡೆಯುವ ಉದ್ದೇಶದಿಂದ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**ಸಹಿ/-**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**